೧. ಶರಣು ಶರಣು ॥ ಪ ॥ ಶರಣು ಗಜಮುಖ ಆಖು ವಾಹನ ।
ಶರಣು ಸುರಗಣ ಸೇವಿತ । ಶರಣು ಸಕಲಾಭೀಷ್ಟದಾಯಕ । ಶರಣು ವಿಘ್ನವಿನಾಶಕ ॥೧॥

ಹೇಮ ಖಚಿತ ಕಿರೀಟ ಕುಂಡಲ । ಕಾಮಿತಾರ್ಥ ಪ್ರದಾಯಕ ।
ಅಮಿತ ಸೌಲಭ್ಯ ಪ್ರಬಲ ಶಾಸ್ತ್ರೋದ್ಧಾಮ ವಿದ್ಯಾ ಶರನಿಧೆ ॥ ೨ ॥

ಪಾಶ ಮೋದಕ ಪರಶುಧರ ಫಣಿ ಭೂಷ ಪಾರ್ವತಿ ನಂದನ ।
ವಾಸವಾರ್ಚಿತ ವಿಜಯವಿಠಲನ ದಾಸಭೋ ಗಣನಾಯಕ ॥ ೩ ॥

2. ತಾರಮ್ಮಯ್ಯ, ಯದುಕುಲ ವಾರಿಧಿ ಚಂದ್ರಮನ || ಪಲ್ಲವಿ ||
ಮಾರಜನಕನ ಮೋಹನಾಂಗನ ಸೇರಿ ಸುಖಿಸಲು ಹಾರೈಸಿ ಬಂದೆವು || ಅನು ಪಲ್ಲವಿ ||

ಬಿಲ್ಲ ಹಬ್ಬಗಳಂತೆ, ಅಲ್ಲಿ ಬೀದಿ ಶೃಂಗಾರವಂತೆ
ಮಲ್ಲರ ಕಾಳಗ ಮದ್ದಾನೆಯಂತೆ
ಫುಲ್ಲಾಕ್ಷನು ತಾನಲ್ಲಿಗೆ ತೆರಳಿದ || ೧ ||

ಮಧುರಾಪುರಿಯಂತೆ, ಅಲ್ಲಿ ಮಾವ ಕಂಸನಂತೆ
ಒದಗಿದ ಮದಗಜ ತುರಗ ಸಾಲಿನಲಿ
ಮದಮೋಹನ ಕೃಷ್ಣ ಮಧುರೆಗೆ ತೆರಳಿದ || ೨ ||

ಅತ್ತೆ ಮಾವನ ಬಿಟ್ಟು, ಬಂದೆವು ಹಿತ್ತಲ ಬಾಗಿಲಿಂದ
ಭಕ್ತವತ್ಸಲನ ಬಹು ನಂಬಿದ್ದೆವು
ಉತ್ಸಾಹ ಭಂಗ ಮಾಡಿದನಮ್ಮ || ೩ ||

ರಂಗನ ಸೆರೆ ನಂಬಿ ಬಂದೆವು ಸಂಗ ಸುಖವ ಬಯಸಿ
ಭಂಗಿಸಿ ನಮ್ಮನು ಹ್ಯಾಂಗೆ ಪೋದನಮ್ಮ
ಮಂಗಳಮೂರುತಿ ಮದನಗೋಪಾಲನು || ೪ ||

ಶೇಷಗಿರಿಯ ಮೇಲೆ, ಹರಿ ತಾ ವಾಸವಾಗಿಹ ಕಾಣೆ
ಸಾಸಿರನಾಮದ ಒಡೆಯನೆಂದನಿಸಿದ
ಶ್ರೀಶ ಪುರಂದರವಿಠ್ಠಲರಾಯನ || ೫ ||
****

3.ಸೋಜುಗದ ಸೂಜು ಮಲ್ಲಿಗೆ

ಸೋಜುಗದ ಸೂಜು ಮಲ್ಲಿಗೆ,
ಮಾದೇವ ನಿಮ್ಮ ಮಂಡೆ ಮ್ಯಾಲೆ ದುಂಡು ಮಲ್ಲಿಗೆ

ಅಂದಾವರೆ ಮುಂದಾವರೆ ಮತ್ತೆ ತಾವರೆ ಪುಷ್ಪ, ಚಂದಕ್ಕಿ ಮಾಲೆ ಬಿಲ್ಪತ್ರೆ ಮಾದೇವ ನಿಮ್ಗೆ
ಚಂದಕ್ಕಿ ಮಾಲೆ ಬಿಲ್ಪತ್ರೆ ತುಳಸಿದಳವ ಮಾದಪ್ನ ಪೂಜೆಗೆ ಬಂದು.

ಮಾದೇವ ನಿಮ್ಮ ಸೋ|2|

ತಪ್ಪಳೆ ಬೇಳಗಿವ್ನಿ ತುಪ್ಪವ ಕಾಯ್ಸಿವ್ನಿ , ಕಿತ್ತಳೆ ಹಣ್ಣ ತಂದಿವ್ನಿ ಮಾದೇವ ನಿಮ್ಗೆ
ಕಿತ್ತಳೆ ಹಣ್ಣ ತಂದಿವ್ನಿ, ಮಾದಪ್ಪ. ಕಿತ್ತಡಿ ಬರುವ ಪರಸೆಗೆ, ಮಾದೇವ ನಿಮ್ಮ

ಮಾದೇವ ನಿಮ್ಮ ಸೋ |2|

ಬೆಟ್ಟತ್ಕೊಂಡೋಗೋರ್ಗೆ ಹಟ್ಟಿ ಹಂಬಲವ್ಯಾಕ ಬೆಟ್ಟದ್ಮಾದೇವ ಗತಿಯೆಂದು ಮಾದೇವ ನೀವೆ
ಬೆಟ್ಟದ್ಮಾದೇವ ಗತಿಯೆಂದು ಅವರಿಂದು ಹಟ್ಟಿ ಹಂಬಲವ ಮರೆತಾರೋ. ಮಾದೇವ ನಿಮ್ಮ

ಮಾದೇವ ನಿಮ್ಮ ಸೋ |2|

ಹುಚ್ಚೆಳ್ಳು ಹೂನಂಗೆ ಹೆಚ್ಚೇವೊ ನಿನ್ನ ಪರುಸೆ, ಹೆಚ್ಚಾಳಗಾರ ಮಾದಯ್ಯ ಮಾದಯ್ಯ ನೀನೆ
ಹೆಚ್ಚಳಗಾರ ಮಾದಯ್ಯ ಎಳು ಮಲೆಯ | ಹೆಚ್ಚೇವು ಗೌರಳ್ಳಿ ಕಣಿವೇಲಿ ಮಾದೇವ ನಿಮ್ಮ

ಮಾದೇವ ನಿಮ್ಮ ಸೋ |2|

**4.ಭೋ ಶಂಭೋ ಶಿವ ಶಂಭೋ ಸ್ವಯಂಭೋ ||**
ಗಂಗಾಧರ ಶಂಕರ ಕರುಣಾಕರ

ಮಾಮವ ಭವ ಸಾಗರ ತಾರಕ ||
ನಿರ್ಗುಣ ಪರಬ್ರಹ್ಮ ಸ್ವರೂಪ
ಗಮಾಗಮ ಭೂತ ಪ್ರಪಂಚ ರಹಿತ
ನಿಜಗುಹ ನಿಹಿತ ನಿತಾಂತ ಅನಂತ
ಆನಂದ ಅತಿಶಯ ಅಕ್ಷಯಲಿಂಗ ||೧||

ಧಿಮಿತ ಧಿಮಿತ ಧಿಮಿ ಧಿಮಿಕಿಟ ಕಿಟತೊಂ
ತೋಂ ತೋಂ ತರಿಕಿಟ ತರಿಕಿಟ ಕಿಟತೊಂ
ಮತಂಗ ಮುನಿವರ ವಂದಿತ ಈಶ
ಸರ್ವ ದಿಗಂಬರ ವೇಷ್ಟಿತ ವೇಷ
ನಿತ್ಯ ನಿರಂಜನ ನಿತ್ಯ ನಟೇಶ
ಈಶ ಸಭೇಶ ಸರ್ವೇಶ ||೨||

**5.**ಗಣನಾಯಕಾಯ, ಗಣದೈವತಾಯ
ಗಣಾಧ್ಯಕ್ಷಾಯ ಧೀಮಹಿ

ಗುಣ ಶರೀರಾಯ, ಗುಣಮಂಡಿತಾಯ
ಗುಣೇಶಾನಾಯ ಧೀಮಹಿ
ಗುಣಾಧೀತಾಯ ,ಗುಣಾಧೀಶಾಯ
ಗುಣಪ್ರವಿಷ್ಟಾಯ ಧೀಮಹಿ

ಏಕದಂತಾಯ ವಕ್ರತುಂಡಾಯ
ಗೌರಿತನಯಾಯ ಧೀಮಹಿ
ಗಜೇಶಾನಾಯ ಬಾಲಚಂದ್ರಾಯ
ಶ್ರೀಗಣೇಶಾಯ ಧೀಮಹಿ
||ಏಕದಂತಾಯ||

ಗಾನಚತುರಾಯ ಗಾನಪ್ರಾಣಾಯ
ಗಾನಾಂತರಾತ್ಮನೆ
ಗಾನೋತ್ಸುಕಾಯ ಗಾನಮತ್ತಾಯ
ಗಾನೋತ್ಸುಕ ಮನಸ್ಸೇ

ಗುರುಪೂಜಿತಾಯ , ಗುರು ದೈವತಾಯ
ಗುರು ಕುಲಸ್ಥಾಯಿನೆ
ಗುರು ವಿಕ್ರಮಾಯ , ಗುಹ್ಯಪ್ರವರಾಯ
ಗುರವೇ ಗುಣ ಗುರವೇ

ಗುರುದೈತ್ಯ ಕಲಾಕ್ಷೇತ್ರೇ ಗುರು
ಧರ್ಮಸದಾರಾಧ್ಯಾಯ
ಗುರು ಪುತ್ರ ಪರಿತಾಥ್ರೇ
ಗುರು ಪಾಖಂಡ ಖಂಡಕಾಯ

ಗೀತ ಸಾರಾಯ, ಗೀತ ತತ್ವಾಯ
ಗೀತ ಗೋತ್ರಾಯ ಧೀಮಹಿ
ಗೂಢಗುಲ್ಫಾಯ, ಗಂಧ ಮತ್ತಾಯ
ಗೋಜಯ ಪ್ರದಾಯ ಧೀಮಹಿ

ಗುಣಾಧೀತಾಯ ಗುಣಾಧೀಶಾಯ
ಗುಣಪ್ರವಿಷ್ಟಾಯ ಧೀಮಹಿ
||ಏಕದಂತಾಯ||